**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಐವಾನ್ ಡಿ'ಸೋಜಾ ಇವರ ನಿಯಮ 72ರ ಮೇರೆಗೆ ಸಲ್ಲಿಸಿರುವ ಗಮನ ಸೆಳೆಯುವ ಸೂಚನೆಗೆ ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆಯ ಉತ್ತರ.**

**ಪ್ರಶ್ನೆ:**

" 2019-20ನೇ ಸಾಲಿನ ಬಜೆಟ್‌ನಲ್ಲಿ ಕ್ರೈಸ್ತ ಅಭಿವೃದ್ಧಿ ನಿಗಮದ ಸ್ಥಾಪನೆಯ ಬಗ್ಗೆ ಘೋಷಣೆಯಾಗಿದ್ದರೂ, ಈವರೆವಿಗೂ ಅನುಷ್ಠಾನವಾಗದಿರುವುದರ ಬಗ್ಗೆ ಮಾನ್ಯ ಪಶುಸಂಗೋಪನೆ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರ ಗಮನ ಸೆಳೆಯ ಬಯಸುತ್ತೇನೆ"

**ಉತ್ತರ:**

2019-20ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ: 182ರಲ್ಲಿ ಘೋಷಿಸಲಾಗಿರುವ ಹೊಸದಾಗಿ ಕ್ರಿಶ್ಚಿಯನ್ ಅಭಿವೃದ್ಧಿ ನಿಗಮವನ್ನು ಸ್ಥಾಪಿಸುವ ಪ್ರಸ್ತಾವನೆಯನ್ನು ಕಡತ ಸಂಖ್ಯೆ: ಎಂಡಬ್ಲೂಡಿ 150 ಎಂಡಿಎಸ್ 2019ರನ್ನು ಆರ್ಥಿಕ ಇಲಾಖೆಯ ಸಹಮತಿಗಾಗಿ ದಿನಾಂಕ: 22.03.2019ರಂದು ಸಲ್ಲಿಸಲಾಗಿತ್ತು. ಆರ್ಥಿಕ ಇಲಾಖೆಯು (ವೆಚ್ಚ-3&9) ದಿನಾಂಕ: 04-04-2019 ರಲ್ಲಿ ನೀಡಿರುವ ಅಭಿಪ್ರಾಯದಲ್ಲಿ ಪ್ರಸ್ತುತ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಕಡತವನ್ನು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ದಿನಾಂಕ: 05.04.2019 ರಂದು ಹಿಂದಿರುಗಿಸಿರುತ್ತಾರೆ. ತದನಂತರ ಪುನ: ಕಡತವನ್ನು ಆರ್ಥಿಕ ಇಲಾಖೆಗೆ ದಿನಾಂಕ: 06.06.2019ರಂತೆ ಸಲ್ಲಿಸಲಾಗಿತ್ತು. ಆರ್ಥಿಕ ಇಲಾಖೆಯು ದಿನಾಂಕ: 19-06-2019 ರಂದು ನೀಡಿರುವ ಅಭಿಪ್ರಾಯದಲ್ಲಿ ಕ್ರಿಶ್ಚಿಯನ್ ಅಭಿವೃದ್ಧಿ ಸ್ಥಾಪನೆಯ ಕರಡು Memorandum of Association & Articles of Association ತಯಾರಿಸಿ ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ಅಭಿಪ್ರಾಯ ಪಡೆದು ಕಡತವನ್ನು ಮರು ಸಲ್ಲಿಸುವಂತೆ ತಿಳಿಸಿದೆ.

ಅದರಂತೆ ಕರಡು Memorandum of Association & Articles of Association ತಯಾರಿಸಿ ಸಾರ್ವಜನಿಕ ಉದ್ದಿಮೆಗಳ ಇಲಾಖೆಗೆ ದಿನಾಂಕ: 01.07.2019ರಂದು ಸಲ್ಲಿಸಲಾಗಿತ್ತು.

ಸಾರ್ವಜನಿಕ ಉದ್ದಿಮೆ ಇಲಾಖೆ ಇವರು ಕ್ರಿಶ್ಚಿಯನ್ ಅಭಿವೃದ್ಧಿ ನಿಗಮದ ಕರಡು Memorandum of Association & Articles of Association ಕಂಪನಿ ಕಾಯ್ದೆ 2013ರನ್ವಯ ಸಿದ್ಧಪಡಿಸಿರುವುದಿಲ್ಲ ಎಂದು ತಿಳಿಸುತ್ತ ಕಡತವನ್ನು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ದಿನಾಂಕ: 10.07.2019ರಂದು ಹಿಂದಿರುಗಿಸಿರುತ್ತಾರೆ.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ ಕ್ರಿಶ್ಚಿಯನ್ ಅಭಿವೃದ್ಧಿ ನಿಗಮದ ಕರಡು Memorandum of Association & Articles of Association ಕಂಪನಿ ಕಾಯ್ದೆ 2013ರ ಸೆಕ್ಷನ್-4 ಮತ್ತು 5 ರನ್ವಯ ಸಿದ್ಧಪಡಿಸಿ ಕಡತವನ್ನು ಪುನ: ಸಾರ್ವಜನಿಕ ಉದ್ದಿಮೆ ಇಲಾಖೆಗೆ ದಿನಾಂಕ: 10.10.2019ರಂದು ಅಭಿಪ್ರಾಯಕ್ಕಾಗಿ ಸಲ್ಲಿಸಲಾಗಿದೆ.

ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ಅಭಿಪ್ರಾಯ ಬಂದ ನಂತರ ಕಡತವನ್ನು ಆರ್ಥಿಕ ಇಲಾಖೆ ಮತ್ತು ಯೋಜನಾ ಇಲಾಖೆಯ ಸಹಮತಿಯನ್ನು ಪಡೆದು ಕ್ರೈಸ್ತ ಅಭಿವೃದ್ಧಿ ನಿಗಮ ರಚಿಸಲು ಕ್ರಮವಹಿಸಲಾಗುವುದು.

(ಪ್ರಭು ಬಿ. ಚೌವ್ಹಾಣ್)
ಪಶುಸಂಗೋಪನೆ, ಅಲ್ಪಸಂಖ್ಯಾತರ ಕಲ್ಯಾಣ,
ಹಜ್ ಮತ್ತು ವಕ್ಫ್ ಸಚಿವರು

MWD 27 LMQ 2019